ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (247) 106
ಸದಸ್ಯರ ಹೆಸರು : ಶ್ರೀ ನಾಯ್ಕ್ ಜೆ.ಡಿ. (ಭಟ್ಕಳ)
ಉತ್ತರಿಸಬೇಕಾದ ಸಚಿವರು : (ಶ್ರೀ ಆನಂದ ವಸಂತ ಆಸ್ನೋಟಿಕರ್)
ಮೀನುಗಾರಿಕೆ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹೊನ್ನಾವರದ ಕಾಸರಗೋಡ ಬಂದರಿನಲ್ಲಿ ಹೂಳು ತುಂಬಿ ಮೀನುಗಾರಿಕೆಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೊನ್ನಾವರ ಮೀನಗಾರಿಕೆ ಬಂದರಿನ ಅಳಿವೆ ಬಾಯಿಯಲ್ಲಿ ಹೂಳು ತುಂಬಿ ಮೀನಗಾರಿಕೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ. ಕಳೆದ 3 ವರ್ಷಗಳಲ್ಲಿ ಎಷ್ಟು ಬೋಟು ಮತ್ತು ದೋಣಿ ಅಳಿವೆಯಲ್ಲಿ ಒಡೆದು ಹೋಗಿದೆ ಹಾಗೂ ಎಷ್ಟು ಜನ ಮೀನುಗಾರರು ತೀರಿಕೊಂಡಿದ್ದಾರೆ(ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ 5 ಯಾಂತ್ರಿಕೃತ ದೋಣಿ ಮತ್ತು ಒಂದು ಗಿಲ್‌ನೆಟ್ ದೋಣಿ ದುರಂತಕ್ಕೀಡಾಗಿವೆ ಹಾಗೂ ಒಬ್ಬ ಮೀನಗಾರ ಮೃತಪಟ್ಟಿರುತ್ತಾರೆ.
ಇ)	ಈ ಮೀನುಗಾರಿಕಾ ಬಂದರಿನ ಹೂಳು ಎತ್ತು ಬಂಡಿ ಹಾಗೂ ಬ್ರೇಕ್ ವಾಟರ್ ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ.	ಬಂದರಿನ ಅಳಿವೆ ಬಾಯಿಯಲ್ಲಿ ಹೂಳೆತ್ತುವ ಬಗ್ಗೆ ಅಂದಾಜುಪಟ್ಟ ತಯಾರಿಸಲಾಗಿದ್ದು. ರೂ. 50.00 ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಈ ಬಗ್ಗೆ ಟೆಂಡರು ಕರೆಯಲಾಗಿದ್ದು. ಕೆಲಸದ ಆದೇಶ ನೀಡಲಾಗಿದೆ. ಮಳೆಗಾಲದ ನಂತರ ಕಾಮಗಾರಿ ಪ್ರಾರಂಭ ಮಾಡಲಾಗುವುದು. ಬ್ರೇಕ್ ವಾಟರ್ ನಿರ್ಮಾಣದ ಬಗ್ಗೆ ಪೂನಾದ ಕೇಂದ್ರ ಜಲ ಮತ್ತು ವಿದ್ಯುತ್ ಸಂಶೋಧನಾ ಕೇಂದ್ರ ಅವರಿಂದ ಅಂತಿಮ ಭೌತಿಕ ವಿನ್ಯಾಸ ಪಡೆದು ವಿವರವಾದ ಅಂದಾಜು ತಯಾರಿಸಿ ಅಗತ್ಯ ಅನುದಾನ ಮತ್ತು ಅನುಮತಿ ಪಡೆದು ಟೆಂಡರ್ ಪ್ರಕ್ರಿಯೆಯ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.
ಈ)	ಸದರಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು ? (ಕಾಮಗಾರಿ ವಿವರ ನೀಡುವುದು)	ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗುತ್ತದೆ.